
ಹಾರುವ ಓತಿ


ಕಡ್ಡಿ ಹೋಲುವ ಕಂಬಳಿ ಹುಳ


ಬಸವನ ಹುಳದಂಥ ಜೇಡ


ಥೇಟ್ ಇರುವೆಯಂತೆ ಇರುವ ಜೇಡ


ವಿಚಿತ್ರ ರೂಪದ ಜೇಡ


ತನ್ನ ರಕ್ಷಣೆಗೆ ಎಲೆಯ ಮರೆಯಲ್ಲಿ ಅವಿತ ಕೀಟ

ಮಿಂಚಿನ ವೇಗದಲ್ಲಿ ಓಡುವ ಜಿಂಕೆಯನ್ನು ಬೇಟೆಯಾಡುತ್ತದೆ. ಜಿಂಕೆಗೆ ನೆಲದ ಮೇಲಿರುವ ಹೆಬ್ಬಾವು ಕಾಣುವುದೇ ಇಲ್ಲ. ಅಲ್ಲಿನ ಪರಿಸರದಲ್ಲಿ ತನ್ನ ದೇಹವನ್ನು ಕಾಣದಂತೆ ಲೀನ ಮಾಡಿಕೊಂಡ ಹೆಬ್ಬಾವು ಜಿಂಕೆಗೆ ಥಕ್ಕನೆ ಕಾಣದಿರುವ ಮೋಸವೇ ಛದ್ಮವೇಷ. ಹೆಬ್ಬಾವು ತನ್ನ ದೇಹವನ್ನು ಮರದ ಕೊರಡಿನಂತೆ ಉಂಡೆ ಮಾಡಿಕೊಂಡು ಮಣ್ಣಿನ ಬಣ್ಣದಲ್ಲಿ ದಿನಗಟ್ಟಲೆ ಬೇಟೆಗೆ ಕಾಯುತ್ತದೆ.

ಆಜಾನುಬಾಹು ಹೆಬ್ಬುಲಿಯು ಹೊಂಚು ಹಾಕಿ ತನ್ನ ಬೇಟೆಯನ್ನು ದಕ್ಕಿಸಿಕೊಳ್ಳುವುದೂ ಸೃಷ್ಟಿ ನೀಡಿದ ಈ ಮರೆಮಾಚುವಿಕೆಯಲ್ಲೇ. ಹುಲಿ ಬೇಟೆಯ ಸಮಯದಲ್ಲಿ ಪೊದೆಗಳ ನಡುವೆ ಅವಿತ ಕೂಡಲೇ ಪರಿಸರದಲ್ಲಿ ಒಂದಾಗಿ ಕಲೆತುಹೋಗುತ್ತದೆ.

ಕೆಲ ಜೀವಿಗಳು ಸುತ್ತಮುತ್ತಲಿನ ಕಸ, ಕಡ್ಡಿ ಇಲ್ಲವೇ ತಾವು ಬೇಟೆಯಾಡಿ ತಂದುಳಿಸಿದ ಜೀವದ ಪಳೆಯುಳಿಕೆಗಳನ್ನೇ ಹೊದಿಕೆಯಂತೆ ಹೊದ್ದು ವೇಷ ಕಟ್ಟುತ್ತವೆ. ಇನ್ನೂ ಕೆಲವು ಎಲೆ, ಹೂವು, ತೊಗಟೆ, ಬೇರು, ಮಣ್ಣು ಮೈ ಮೇಲೇರಿಸಿ ಮುಖವಾಡ ಕಟ್ಟುತ್ತಾ ಬಾಳುತ್ತವೆ.

'ಬ್ಯಾಗ್ ವರ್ಮ್' ಪತಂಗ ಇದಕ್ಕೆ ಅದ್ಭುತ ಉದಾಹರಣೆ. ಈ ಕೀಟ, ಬೆಂಕಿಕಡ್ಡಿಯ ಗಾತ್ರದ ಸಣ್ಣ ಸಣ್ಣ ಕಡ್ಡಿಗಳ ಬಳಸಿ ತನ್ನ ವಾಸಸ್ಥಾನದಲ್ಲಿ ದೊರೆಯುವ ಹೂವು, ಎಲೆ, ಪಾಚಿ ಬಳಸಿ ಕಪಟವೇಷ ಧರಿಸುತ್ತದೆ. ಜೊತೆಗೆ ತನ್ನಲ್ಲೇ ಉತ್ಪತ್ತಿಯಾಗುವ ವಿಶೇಷ ಬಗೆಯ ಅಂಟಿನಿಂದ ನಾನಾ ಬಗೆಯ ಅಮೋಘ ಕರಕುಶಲ ಪರಿಕರಗಳನ್ನು ನಿರ್ಮಿಸಿಕೊಳ್ಳುತ್ತದೆ. ಕೆಲವೊಮ್ಮೆ ತನ್ನ ದೇಹದ ಸಾಮರ್ಥ್ಯಕ್ಕೂ ಮಿಗಿಲಾದ ಭಾರದ ವಸ್ತುಗಳನ್ನು ಸುತ್ತಿಕೊಂಡು ಲೋಡ್ ಲಾರಿಯಂತೆ ನಡೆದಾಡುತ್ತದೆ.

ಇದೇ ರೀತಿಯಲ್ಲಿ 'ಏಷಿಯನ್ ಬಗ್' ಎಂಬ ಕೀಟ ತಾನು ಬೇಟೆಯಾಡಿದ ಕೀಟಗಳ ಅಸ್ಥಿಪಂಜರ, ಬಸವನ ಹುಳದ ಪೊರೆ, ಶಂಖಗಳನ್ನು ಸಂಯೋಜಿಸಿಕೊಂಡು ಎದುರಾಳಿಯ ಎದೆಯಲ್ಲಿ ಭಯ ಹುಟ್ಟಿಸುವ ರೀತಿಯ ಪೋಷಾಕು ಧರಿಸುತ್ತದೆ. ಈ ರೀತಿಯ ವೇಷ ಬದಲಿಸುವ ಕ್ರಿಯೆಯಿಂದ ಕೆಲವು ಕೀಟಗಳಿಗೆ ಒಳ್ಳೆಯ ಬೇಟೆ ದೊರೆಯಬಹುದು. ಹಲವೊಮ್ಮೆ ಸ್ವಂತ ಜೀವವೂ ಉಳಿಯಬಹುದು.

ಪ್ರಕೃತಿಯ ಈ ಕಲಾವಂತಿಕೆ, ಬಣ್ಣದ ಬೆಡಗು, ಮುಖ ಮರೆಮಾಚುವ ಪ್ರಸಾಧನ ಎಲ್ಲವೂ ಅಚ್ಚರಿಯ ಹೊಸ ರೂಪಗಳು. ಮೊಗೆದಷ್ಟು ಆಳವಾಗಿ, ಊಹಿಸಿದಷ್ಟು ವಿಶಾಲವಾಗಿ ಸವಾಲು ಹಾಕುತ್ತಾ ನಿಲ್ಲುವ ಜೀವಿಗಳ ಈ ರೂಪವನ್ನು ಕಪಟ ಎನ್ನುವುದೋ? ಜೀವದ ಉಳಿವು ಎನ್ನುವುದೋ? ಬದುಕಿನ ಅನಿವಾರ್ಯತೆ ಎನ್ನುವುದೋ?

ಪ್ರತಿಕ್ರಿಯಿಸಿ: feedback@sudha.co.in